ಮೈಸೂರು ವಿಶ್ವವಿದ್ಯಾನಿಲಯ

Estd-1916

(Re-accredited by NAAC at "A" Grade with a CGPA of 3.01)

(overall Ranking 34th and Universities 19th in NIRF Ranking 2020)

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005

ಸಂಖ್ಯೆ:ಪ.ವಿ.8.4/47/2012-13 ದಿನಾಂಕ: 16-12-2021

## ಅಧಿಸೂಚನೆ

ವಿಷಯ: ಜನವರಿ 2022ರಲ್ಲಿ ನಡೆಯಲಿರುವ ಬಿ.ಎಡ್. ಪದವಿ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಬಗ್ಗೆ.

ಉಲ್ಲೇಖ: 1) ಕುಲಸಚಿವರು, ಮೈವಿವಿ, ಮೈಸೂರು, ಇವರ ಸುತ್ತೋಲೆ ಸಂಖ್ಯೆ.ಎಸಿ6/159/2017-18, ದಿನಾಂಕ: 02-07-2021.
2) ಕುಲಸಚಿವರ ಮೈವಿವಿ ಮೈಸೂರು, ಇವರ ಅಧಿಸೂಚನೆ ಸಂಖ್ಯೆ:ಎಸಿ2(ಎಸ್)/34/1990-91, ದಿನಾಂಕ: 13-09-2021.

*****

ಜನವರಿ 2022ರಲ್ಲಿ ನಡೆಯಲಿರುವ ದ್ವಿತೀಯ ಹಾಗೂ ಚತುರ್ಥ **ಸೆಮಿಸ್ಟರ್ ಬಿ.ಎಡ್.** (ಸಿ.ಬಿ.ಸಿ.ಎಸ್ ಮತ್ತು ಸಿ.ಎ.ಜಿ.ಪಿ ಸ್ಕೀಂ) ಪದವಿ ಲಿಖಿತ ಪರೀಕ್ಷೆಗಳು **ದಿನಾಂಕ: 18-01-2022 ರಿಂದ** ಪ್ರಾರಂಭವಾಗುತ್ತವೆ. ಪ್ರಾಯೋಗಿಕ ಪರೀಕ್ಷೆಗಳು ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ನಡೆಯುತ್ತವೆ. ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಅರ್ಜಿ ಮತ್ತು ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸಲು ತಿಳಿಸಲಾಗಿದೆ. ಲಿಖಿತ ಪರೀಕ್ಷೆಗಳ ವೇಳಾಪಟ್ಟಿಯನ್ನು ನಂತರ ಕಳುಹಿಸಲಾಗುವುದು.

| | | |
|---|---|---|
| 1 | **ಪರೀಕ್ಷಾ ಅರ್ಜಿಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್: www.uni-mysore.ac.in ವೆಬ್‌ಸೈಟ್‌ನಲ್ಲಿ Download ಮಾಡಿಕೊಳ್ಳುವುದು.** | |
| 2 | ಪರೀಕ್ಷಾ ಶುಲ್ಕವನ್ನು ಪಾವತಿ ಮಾಡಲು ಮತ್ತು ಭರ್ತಿಮಾಡಿದ ಅರ್ಜಿಗಳನ್ನು ಕಾಲೇಜಿಗೆ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ | **27-12-2021** |
| 3 | ಪರೀಕ್ಷಾ ಶುಲ್ಕವನ್ನು ಡಿ.ಡಿ ಮೂಲಕ **ಪರೀಕ್ಷಾ ಖಾತೆಗೆ (ಎಸ್.ಬಿ.ಐ ವಿಶ್ವವಿದ್ಯಾನಿಲಯ ಆವರಣ ಶಾಖೆ, ಮೈಸೂರು) ಪಾವತಿಸಿ ಅದರ ಮೂಲ ಪ್ರತಿಯನ್ನು ಈ ಕಛೇರಿಗೆ ಕಳುಹಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ** | **31-12-2021** |
| 4 | ಆನ್‌ಲೈನ್ ಮೂಲಕ ಪರೀಕ್ಷಾ ಅರ್ಜಿಗಳನ್ನು ಕಾಲೇಜಿನವರು ಭರ್ತಿ ಮಾಡಲು ಕೊನೆ ದಿನಾಂಕ(ಅರ್ಜಿಗಳು ಬಂದಂತೆ ಆ ದಿನವೇ ದಾಖಲಿಸುವುದು, ದಾಖಲಿಸಿದ ಮಾಹಿತಿಯನ್ನು ಪರಿಶೀಲಿಸಿದ ನಂತರ **lock** ಮಾಡುವುದು) | **31-12-2021** |
| 5 | ಪ್ರವೇಶ ಪತ್ರಗಳನ್ನು ಮುದ್ರಿಸಿಕೊಂಡು ವಿಶ್ವವಿದ್ಯಾನಿಲಯ ಅನುಮೋದನೆ ಪಡೆಯಲು ಕೊನೆಯ ದಿನಾಂಕ (ಆನ್‌ಲೈನ್ ಮೂಲಕ ಅಭ್ಯರ್ಥನಾ ಪಟ್ಟಿಯನ್ನು ಮುದ್ರಿಸಿ ಪ್ರಾಂಶುಪಾಲರ ಸಹಿ ಪಡೆದು ಒಂದು ಪ್ರತಿಯನ್ನು ಪ್ರವೇಶ ಪತ್ರಗಳ ಜೊತೆಯಲ್ಲಿ ಕುಲಸಚಿವ (ಪರೀಕ್ಷಾಂಗ)ಅವರಿಗೆ ಸಲ್ಲಿಸಬೇಕು) | **07-01-2022** |
| 6 | ಆನ್‌ಲೈನ್ ಮೂಲಕ $C_1$ ಮತ್ತು $C_2$ ಅಂಕಗಳನ್ನು ಎಂಟ್ರಿ ಮಾಡಲು ನಿಗದಿಪಡಿಸಿರುವ ಕೊನೆ ದಿನಾಂಕ (ದಾಖಲಿಸಿದ ಆಂತರಿಕ ಅಂಕಗಳನ್ನು ಪರಿಶೀಲಿಸಿದ ನಂತರ **lock** ಮಾಡುವುದು) | **13-01-2022** |
| 7 | **ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ** | **18-01-2022** |

## ಪರೀಕ್ಷಾ ಶುಲ್ಕಗಳು :

| | | |
|---|---|---|
| ಪೂರ್ಣ ಪರೀಕ್ಷೆಗೆ | - | ರೂ.1300-00 |
| ಒಂದು ವಿಷಯಕ್ಕೆ (ಪ್ರಾಯೋಗಿಕ ಪರೀಕ್ಷೆಯೊಂದಿಗೆ) | - | ರೂ. 770-00 |
| ಒಂದು ವಿಷಯಕ್ಕೆ (ಪ್ರಾಯೋಗಿಕ ಪರೀಕ್ಷೆ ಇಲ್ಲದೆ ಇರುವ) | - | ರೂ. 440-00 |

| | |
|---|---|
| **ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ (ಪದವಿ ಪ್ರಮಾಣ ಪತ್ರ ಹಾಗೂ ತಾತ್ಕಾಲಿಕ ಉತ್ತೀರ್ಣ ಪ್ರಮಾಣ ಪತ್ರ)** | |
| ಅ) ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ | ರೂ.1940+600=**ರೂ. 2,540/-** |
| ಆ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ವರ್ಗ-1 | ರೂ.900+600=**ರೂ.1500/-** |

## ವಿಶೇಷ ಸೂಚನೆ:

1. ಎಲ್ಲಾ ಪದವಿ ವಿದ್ಯಾರ್ಥಿಗಳ ಆಂತರಿಕ ಮೌಲ್ಯಮಾಪನ ಅಂಕಗಳನ್ನು ಕಾಲೇಜಿನ ಇಂಟರ್‌ನೆಟ್ ಸೌಲಭ್ಯವನ್ನು ಬಳಸಿ ನೇರವಾಗಿ ವಿಶ್ವವಿದ್ಯಾನಿಲಯದ Web Serverಗೆ ಮಾಹಿತಿಯನ್ನು ವರ್ಗಾವಣೆ (Online Transmission) ಮಾಡುವಂತೆ ತಿಳಿಸಲಾಗಿದೆ. ಹಾಗೂ ಅನಿವಾರ್ಯ ಕಾರಣದಿಂದಾಗಿ ಕಾಲೇಜಿನಲ್ಲಿ ಇಂಟರ್‌ನೆಟ್ ಸೌಲಭ್ಯವಿಲ್ಲದಿದ್ದ ಪಕ್ಷದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಯಾವುದೇ ಕಂಪ್ಯೂಟರ್ ಕೇಂದ್ರದಿಂದಲೂ ಮಾಹಿತಿ ರವಾನಿಸಬಹುದಾಗಿದೆ.
2. ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಆಯಾಯಾ ಕಾಲೇಜಿನವರು ಪರೀಕ್ಷೆಗಳು ಪ್ರಾರಂಭವಾಗುವುದಕ್ಕೆ ಸಾಕಷ್ಟು ಮುಂಚಿತವಾಗಿ Online ಮೂಲಕ ಪಡೆದು ಕುಲಸಚಿವ (ಪರೀಕ್ಷಾಂಗ) ಅವರ ಪ್ಯಾಸಿಮಿಲಿ ಹಾಕಿಸಿಕೊಳ್ಳಬೇಕು. ಕುಲಸಚಿವ (ಪರೀಕ್ಷಾಂಗ) ಅವರ ಪ್ಯಾಸಿಮಿಲಿ ಇಲ್ಲದೆ ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂರಿಸಕೂಡದು.

## ಸೂಚನೆಗಳು:

1. **ಮೇಲ್ಕಂಡ ಶುಲ್ಕಗಳ ಜೊತೆಗೆ (ಪರೀಕ್ಷಾ ಶುಲ್ಕ ರಿಯಾಯಿತಿಗೆ ಅರ್ಹರಾಗುವ ಅಭ್ಯರ್ಥಿಗಳೂ ಸೇರಿದಂತೆ) ಎಲ್ಲರೂ ಅಂಕಪಟ್ಟಿ ಶುಲ್ಕ ರೂ.320/-ನ್ನು ಪಾವತಿಸಬೇಕು.**
2. ಶುಲ್ಕವನ್ನು ನಗದು/ಚೆಕ್, ಇತ್ಯಾದಿಗಳ ಮೂಲಕ ಸ್ವೀಕರಿಸಲಾಗುವುದಿಲ್ಲ.
3. **ಪಾವತಿಸಬೇಕಾದ ಒಟ್ಟು ಶುಲ್ಕವನ್ನು ಪರೀಕ್ಷಾ ಖಾತೆ ಸಂಖ್ಯೆ: 54007591200 (ಪರೀಕ್ಷಾ ಖಾತೆಗೆ) ಡಿಡಿ ಮೂಲಕ ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಹೆಸರಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶ್ವವಿದ್ಯಾನಿಲಯ ಆವರಣ ಶಾಖೆ, ಮೈಸೂರು ಇಲ್ಲಿ ಸಂದಾಯ ಮಾಡಿ ಮೂಲ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದು.**
4. ಪ್ರಾಯೋಗಿಕ ಪರೀಕ್ಷಾ ಅಂಕಗಳನ್ನು ಸರಿಯಾದ ಕೋಡ್ ಸಂಖ್ಯೆಯೊಂದಿಗೆ ವಿಷಯವಾರು ಪ್ರತ್ಯೇಕವಾದ ಹಾಳೆಗಳಲ್ಲಿ ಕಳುಹಿಸುವುದು.
5. ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿಗಳ ಪ್ರವೇಶ ಅನುಮೋದನೆ ಆಗದಿರುವಂತಹ ವಿದ್ಯಾರ್ಥಿಗಳಿಗೆ ಯಾವ ಸಂದರ್ಭದಲ್ಲಿಯೇ ಆಗಲಿ ಪರೀಕ್ಷಾ ಶುಲ್ಕವನ್ನು ಪಾವತಿಮಾಡಲು ಮತ್ತು ಪರೀಕ್ಷೆಗಾಗಿ ಅರ್ಜಿ ಸಲ್ಲಿಸಲು ಅನುಮತಿ ನೀಡಲಾಗುವುದಿಲ್ಲ. ಈ ಸಂಬಂಧ ಪ್ರಾಂಶುಪಾಲರು ಅಭ್ಯರ್ಥನಾ ಪಟ್ಟಿಯಲ್ಲಿ ದೃಢೀಕರಿಸಬೇಕು.
6. ಎಲ್ಲಾ ಅಭ್ಯರ್ಥಿಗಳು ಮೇಲೆ ಸೂಚಿಸಿದ ದಿನಾಂಕಗಳಂದು ಅಥವಾ ಅದಕ್ಕಿಂತ ಮುಂಚಿತವಾಗಿ ಪರೀಕ್ಷಾ ಶುಲ್ಕವನ್ನು ತಾವು ಅಧ್ಯಯನ ಮಾಡಿದ ಕಾಲೇಜುಗಳ ಮೂಲಕ ಪಾವತಿಸಬೇಕು. ಅರ್ಜಿಗಳನ್ನು ಇತ್ತೀಚಿನ ಭಾವಚಿತ್ರದೊಡನೆ ಅಲ್ಲಿಯೇ ಸಲ್ಲಿಸಬೇಕು.
7. ಸುತ್ತೋಲೆ ಸಂಖ್ಯೆ: ವಿಫ/1/9/2013-14, ದಿನಾಂಕ: 25-09-2013 ಪ್ರಕಾರ 2013-14ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ/ಡಿಪ್ಲೋಮ/ಕೋರ್ಸ್‌ಗಳಲ್ಲಿ ಪ್ರವೇಶಾತಿ ಪಡೆದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ, ಬೋಧನಾ ಶುಲ್ಕ, ಪರೀಕ್ಷಾ ಶುಲ್ಕ, ಅಂಕಪಟ್ಟಿ ಶುಲ್ಕ ಮತ್ತು ಅಂತಿಮ ಪದವಿ ಪ್ರಮಾಣ ಪತ್ರದ ಶುಲ್ಕಗಳನ್ನು ಕಟ್ಟಿಸಿಕೊಳ್ಳಬಾರದೆಂದು ಸರ್ಕಾರದ ಆದೇಶವಿರುತ್ತದೆ. ಇದರಂತೆ ಕ್ರಮತೆಗೆದುಕೊಳ್ಳುವುದು.
8. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಅವರ ಪೋಷಕರ ಆದಾಯ ರೂ.2.5 ಲಕ್ಷಗಳು ಮೀರಿದಲ್ಲಿ ಅವರುಗಳಿಂದ ಪೂರ್ಣ ಪರೀಕ್ಷಾ ಶುಲ್ಕ ಸಂಗ್ರಹಿಸುವುದು.

9. ಪ್ರವರ್ಗ-1 ಮತ್ತು ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯಲು ಅರ್ಹರಾದ ಇತರೆ ವರ್ಗಗಳಿಗೆ (ಸಾಮಾನ್ಯ ವರ್ಗದವರನ್ನು ಒಳಗೊಂಡಂತೆ) ಸೇರಿದ ಅಭ್ಯರ್ಥಿಗಳಿಗೆ ಅವರ ಪೋಷಕರ ವಾರ್ಷಿಕ ವರಮಾನದ ಆಧಾರದ ಮೇಲೆ ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ. ಆದರೂ ಅಂತ ಅಭ್ಯರ್ಥಿಗಳು ನಿಗದಿ ಪಡಿಸಿರುವ ಅಂಕಪಟ್ಟಿ ಶುಲ್ಕ ರೂ.320/- ಪಾವತಿಸಬೇಕು.

10. ಪರೀಕ್ಷಾ ಶುಲ್ಕ ವಿನಾಯಿತಿ/ಮರುಭರಿಕೆ ಕುರಿತು ದಿನಾಂಕ: 18-08-2021ರ ಸುತ್ತೋಲೆಯಂತೆ ಕ್ರಮ ವಹಿಸಲು ಈ ಮೂಲಕ ಸೂಚಿಸಲಾಗಿದೆ.

11. ಉಲ್ಲೇಖ 02ರ ವಿಶ್ವವಿದ್ಯಾನಿಲಯದ ಅಧಿಸೂಚನೆಯಂತೆ ಬಿ.ಎಡ್. ಕೋರ್ಸ್‌ಗಳ ಎರಡು ಪಟ್ಟು ಅವಧಿ ಮುಗಿದ ನಂತರ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ (ವಾರ್ಷಿಕ/ಸೆಮಿಸ್ಟರ್) ಪುನಃ ಪರೀಕ್ಷೆ ಬರೆಯಲು ಅಂತಿಮ ಅವಕಾಶ ನೀಡಲಾಗಿದೆ. ಈ ಹೆಚ್ಚುವರಿ ಅವಕಾಶದ ಸೌಲಭ್ಯವನ್ನು ಪಡೆಯುವಂತಹ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವು ನಾಲ್ಕುಪಟ್ಟು ಹೆಚ್ಚಾಗಿರುತ್ತದೆ. ಪರೀಕ್ಷಾ ಶುಲ್ಕ ಪಾವತಿ ಮಾಡಲು ಕಡೆಯ ದಿನಾಂಕ ಈ ಅಧಿಸೂಚನೆಯಲ್ಲಿ ತಿಳಿಸಿರುವ ದಿನಾಂಕವೇ ಆಗಿರುತ್ತದೆ.

ಆಯಾ ಕಾಲೇಜಿನ ಪ್ರಾಂಶುಪಾಲರುಗಳನ್ನು ಪರೀಕ್ಷಾ ಮುಖ್ಯ ಅಧೀಕ್ಷಕರಾಗಿ ನೇಮಿಸಲಾಗಿದೆ. "Manual for Conduct of Examination" ರೀತಿಯಲ್ಲಿ ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆಸಲು ಕ್ರಮ ತೆಗೆದುಕೊಳ್ಳಲು ಸಹ ಸೂಚಿಸಲಾಗಿದೆ.

ಕುಲಸಚಿವ (ಪರೀಕ್ಷಾಂಗ) ಅವರಿಂದ ಅನುಮೋದಿಸಲ್ಪಟ್ಟಿದೆ.

K.N. 16/12/21

ಉಪ ಕುಲಸಚಿವ (ಪರೀಕ್ಷಾಂಗ)

ಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಎಡ್. ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಉಪಕುಲಸಚಿವರು (ಶೈಕ್ಷಣಿಕ), ಆಡಳಿತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ವಿಶೇಷಾಧಿಕಾರಿಗಳು, ಪರೀಕ್ಷಾ ಸುಧಾರಣಾ ಘಟಕ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ವ್ಯವಸ್ಥಾಪಕರು, ಮೆ: ಮೆಟಾ-ಐ ಟೆಕ್ನಾಲಾಜೀಸ್ ಪ್ರೈವೇಟ್ ಲಿಮಿಟೆಡ್, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಅಧೀಕ್ಷಕರು/ವಿಷಯ ನಿರ್ವಾಹಕರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಉಪ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾ ಭವನ, ಎಚ್.ಸಿ.ದಾಸಪ್ಪ ವೃತ್ತ, ಮೈಸೂರು- ಮೇಲ್ಕಂಡ ಪ್ರಕಟಣೆಯ ಮುಖ್ಯಾಂಶಗಳನ್ನು ಎಲ್ಲಾ ದೈನಂದಿನ ಪತ್ರಿಕೆಗಳಲ್ಲಿ ಉಚಿತವಾಗಿ ಪ್ರಸಾರ ಮಾಡಲು ಸೂಕ್ತ ಕ್ರಮಕ್ಕಾಗಿ 05 ಪ್ರತಿಗಳೊಂದಿಗೆ.
8. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಸಂಬಂಧಿಸಿದ ಕಡತಕ್ಕೆ.